60 ಸಂಖ್ಯಾಬಲದ 50 ಮೆಟ್ರಿಕ್ ನಂತರ ಬಾಲ ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ತೆರೆಯಲು ಉದ್ದೇಶಿಸಲಾಗಿದ್ದು, ಹಣ ಕಾಸು ಮತ್ತು ಯೋಜನಾ ಇಲಾಖೆಯ ಅನುಮೋದನೆಗೆ ಸಲ್ಲಿಸ ಲಾಗಿದೆ ಸರ್ಕಾರದ ಆದೇಶ ಬಂದ ಕೂಡಲೇ ಅನುಷ್ಠಾನ ಗೊಳಿಸಲು ಕ್ರಮವಹಿಸಲಾಗುವುದು.

ಇ) ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಬಿದಾಯಿ ಯೋಜನೆ

1901 (1716); ಶ್ರೀ ಇಕ್ಬಾಲ್ ಅನ್ಸಾರಿ (ಗಂಗಾವತಿ)

ಅ) ಬಿದಾಯಿ–ಭಾಗ್ಯ ಯೋಜನೆಯಡಿ ಸರ್ಕಾರವು ಮೀಸಲಿಟ್ಟಿರುವ ಅನು ದಾನದ ಮೊತ್ತವೆಷ್ಟು; ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ನಿಗದಿಪಡಿಸಿರುವ ಫಲಾನುಭವಿಗಳ ಗುರಿ ಎಷ್ಟು?

ಆ) ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಕನಿಷ್ಠ 100 ಫಲಾನುಭವಿಗಳಂತೆ ಗುರಿ ನಿಗದಿಪಡಿಸಿರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಪ್ರಸಕ್ತ ಆರ್ಥಿಕ ವರ್ಷದಿಂದ ಈ ಗುರಿಯನ್ನು ಹೆಚ್ಚಿಸಲಾಗುವುದೇ; ಇಲ್ಲದಿದ್ದಲ್ಲಿ ಕಾರಣವೇನು (ವಿವರ ನೀಡುವುದು)?

ಶ್ರೀ ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಪ್ರಸಕ್ತ ಸಾಲಿನಲ್ಲಿ ಬಿದಾಯಿ ಯೋಜನೆಯಡಿ `20000.00 ಲಕ್ಷಗಳನ್ನು ಮೀಸಲಿಡಲಾಗಿದೆ.

ವಿಧಾನಸಭಾ ಕ್ಷೇತ್ರವಾರು ಗುರಿ ನಿಗದಿಪಡಿಸಿರುವುದಿಲ್ಲ. ಜಿಲ್ಲಾವಾರು ಗುರಿ ನಿಗದಿಪಡಿಸಲಾಗಿದೆ.

ಆ) ಇಲ್ಲ. ಆಯಾ ವರ್ಷದ ಆಯವ್ಯಯದಲ್ಲಿ ಮಂಜೂರಾಗುವ ಅನುದಾನಕ್ಕೆ ತಕ್ಕಂತೆ ಜಿಲ್ಲಾವಾರು ಗುರಿನಿಗದಿಪಡಿಸಲಾಗುತ್ತಿದೆ. ಫಲಾನುಭವಿಗಳ ಸಂಖ್ಯೆ ಅತ್ಯಧಿಕವಾಗಿದ್ದು, ಅನುದಾನದ ಕೊರತೆ ಇರುವುದರಿಂದ ವಿಧಾನಸಭಾ ಕ್ಷೇತ್ರವಾರು ಗುರಿ ನಿಗದಿಪಡಿಸಲು ಸಾಧ್ಯವಿರುವುದಿಲ್ಲ.

ಹಾಪ್‌ಕಾಮ್ಸ್‌ಗಳ ವಿವರ

1902 (1586); ಶ್ರೀ ಜಗದೀಶ್ ಕುಮಾರ್ ಆರ್. (ಹೆಬ್ಬಾಳ)

ಅ) ರಾಜ್ಯದಲ್ಲಿರುವ ಹಾಪ್‌ಕಾಮ್ಸ್ ಮಳಿಗೆಗಳ ವಿವರ ಒದಗಿಸುವುದು: (ಕ್ಷೇತ್ರವಾರು)

ಆ) ಜನಸಂಖ್ಯೆಗನುಗುಣವಾಗಿ ಹಾಪ್‌ಕಾಮ್ಸ್ ಮಳಿಗೆಗಳನ್ನು ಪ್ರಾರಂಭಿಸಲು ಸರ್ಕಾರವು ಬದ್ಧವಾಗಿದೆಯೇ;

ಇ) ರಾಜ್ಯದಲ್ಲಿ ಹಾಪ್‌ಕಾಮ್ಸ್ ಮಳಿಗೆಗಳು ವಿಫಲವಾಗಲು ಕಾರಣಗಳೇನು ಹಾಗೂ ಅವುಗಳ ವಿಫಲತೆ ಕಂಡು ಹಿಡಿಯಲು ಸರ್ಕಾರವು ತೆಗೆದು ಕೊಂಡಿರುವ ಕ್ರಮಗಳೇನು?

ಡಾ: ಶಾಮನೂರು ಶಿವಶಂಕರಪ್ಪ (ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು)

ಅ) ರಾಜ್ಯದಲ್ಲಿರುವ ಹಾಪ್‌ಕಾಮ್ಸ್ ಮಳಿಗೆಗಳ ವಿವರ ಕೆಳಕಂಡಂತಿದೆ.

ಕ್ರ. ಸಂ.	ಜಿಲ್ಲೆ	ವಿಧಾನ ಸಭಾ ಕ್ಷೇತ್ರ	ಮಳಿಗೆಗಳ ಸಂಖ್ಯೆ
1	ಬೆಂಗಳೂರು (ನ) & (ಗ್ರಾ)	ಚಿಕ್ಕಪೇಟೆ	13
		ಜಯನಗರ	19
		ರಾಜಾಜಿನಗರ	14
		ರಾಜರಾಜೇಶ್ವರಿನಗರ	10